‘ನನಗಾದರೆ ಆ ವಿಷಯ ಮುಖ್ಯ, ಅದನ್ನು ನಾನು ಬರೆದೆ ಎನ್ನುವುದಲ್ಲ. ಪ್ರೊಫೆಸರ್ ಅಯ್ಯಂಗಾರ್ ಮತ್ತು ಡಾಕ್ಟರ್ ನಾಯ್ಡು ಅವರುಗಳ ಮಾರ್ಗದರ್ಶನವಿರದೆ ನಾನದನ್ನು ಬರೆಯುವುದು ಸಾಧ್ಯವಿರುತ್ತಿರಲಿಲ್ಲ. ಲೈಫ್‌ಟೈಮ್ ಎಚೀವ್‌ಮೆಂಟ್ ಅದು. ಓದು. ನಿನಗೆ ಗೊತ್ತಾಗುತ್ತೆ, ನಾನು ಏನು ಹೇಳ್ತ ಇದ್ದೇನೆ ಎನ್ನುವುದು.’



‘ಆಯ್ತು ಮೇಡಂ.’

‘ಎರಡನೇದಾಗಿ, ನೀನು ಬಹಳ ಆತುರದಲ್ಲಿರುವಂತೆ ಕಾಣಿಸುತ್ತದೆ. ನಿನ್ನ ಇಡೀ ಬಾಡಿ ಲಾಂಗ್ವೇಜ್ ಧಾವಂತದಿಂದ ಕೂಡಿದೆ. ಯಾಕೆ?’

‘ನನಗಿಲ್ಲಿ ಬರುವುದು ಸುಲಭವಾಗಿರಲಿಲ್ಲ, ಮೇಡಂ. ಇಡೀ ದಾರಿಗೆ ವಾಕ್‌ವೇಗಳನ್ನು ಹಾಕಿದ್ದರು. ಏರ್‌ಪೋರ್ಟ್‌ಗಳಲ್ಲಿ ಹಾಕಿರುತ್ತಾರಲ್ಲ, ಅಂಥವು. ಮಧ್ಯೆ ಮೇನ್‌ಸ್ಟ್ರೀಮಿನವರು ಮಾತ್ರ ಹೋಗುವ ವಾಕ್‌ವೇ. ಅದರ ಆಚೀಚೆ ಬದಿಗಳಲ್ಲಿ ನನ್ನಂಥ ಮಾರ್ಜಿನಲ್ ಜನ ಹೋಗುವಂಥ ವಾಕ್‌ವೇಗಳು. ಮೇನ್‌ಸ್ಟ್ರೀಮಿನ ವಾಕ್‌ವೇ ಪ್ಲೇಟುಗಳು ಮುಂದು ಮುಂದಕ್ಕೆ ತಿರುಗುತ್ತಿದ್ದವು; ಆದ್ದರಿಂದ ಅದರಲ್ಲಿರುವವರಿಗೆ ಏನೂ ಅಧ್ವಾನ ಇರಲಿಲ್ಲ. ಬದಿಗಳ ವಾಕ್‌ವೇಗಳು ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿದ್ದವು. ಅದರಲ್ಲಿ ಮುಂದೆ ಸಾಗುವುದು ಕಷ್ಟಕರ. ನಾನು ಅಂಥದೊಂದು ವಾಕ್ವೇಯಲ್ಲಿ ಶ್ರಮದಿಂದ ಬಂದವನು. ಆದ್ದರಿಂದ ತುಂಬಾ ಸುಸ್ತಾಗಿದ್ದೇನೆ. ನನ್ನ ಕಾಲಿನ ಸ್ನಾಯುಗಳು ಕುಸಿವ ಹಾಗೆ ಆಗುತ್ತಿವೆ.’

‘ಯಾಕಿಷ್ಟು ಶ್ರಮ ವಹಿಸಿದೆ?’

‘ನನ್ನ ಮುಖ್ಯವಾಹಿನಿಯ ಸಮಕಾಲೀನರ ಜತೆ ಇಲ್ಲಿ ಬಂದು ಸೇರಬೇಕಿತ್ತಲ್ಲ, ಅದಕ್ಕೆ.’

‘ಎಂದರೆ ನೀನವರ ಜೊತೆ ಪೈಪೋಟಿ ನಡೆಸುತ್ತಿದ್ದಿ!’

‘ನಾನೇನು ಮಾಡಬೇಕಿತ್ತು, ಮೇಡಂ?’

‘ಏನೂ ಮಾಡಬೇಕಿರಲಿಲ್ಲ. ನಿನ್ನಷ್ಟಕೇ ಇದ್ದರೆ ಸಾಕಿತ್ತು; ಖುಷಿಯಿಂದ, ಆನಂದದಿಂದ, ಆರಾಮದಿಂದ, ನಿರಾಳವಾಗಿ. ಅದನ್ನೆಲ್ಲ ಬಲಿಗೊಟ್ಟು ದೊರಕುವ ಸಾಧನೆ ಒಂದು